JULY 21, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಚಂದ್ರನ ಸುಸ್ಥಿರ ಅನ್ವೇಷಣೆಯ, ಮಹತ್ವ ತಿಳಿಸಲು, ಅಂತಾರಾಷ್ಟ್ರೀಯ ಚಂದ್ರ ದಿನಾಚರಣೆ.**
- **ಬೆಂಗಳೂರಿನ, ಸಿ.ಎಸ್.ಐ.ಆರ್. ಪ್ರಯೋಗಾಲಯದಲ್ಲಿ, ಇಂದಿನಿಂದ ಐದು ದಿನ, 'ಜಿಜ್ಞಾಸಾ' ಕಾರ್ಯಾಗಾರ.**
- **ಡಿಜಿಟಲ್ ಪಾವತಿ ಬಗ್ಗೆ, ವರ್ತಕರಲ್ಲಿ ಅತೃಪ್ತಿ; ಕೇಂದ್ರ ಸರ್ಕಾರದೊಂದಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಶೀಘ್ರ ಸಮಾಲೋಚನೆ.**
- **ನರಗುಂದ ರೈತ ಬಂಡಾಯಕ್ಕೆ 45 ವರ್ಷ; ಇಂದು ರೈತ ಹುತಾತ್ಮ ದಿನದ, ಸ್ಮರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**'ಚಂದ್ರನ ಸುಸ್ಥಿರ ಪರಿಶೋಧನೆಯ ಮಹತ್ವ ಹಾಗೂ ನಿಯಂತ್ರಿತ ಅನ್ವೇಷಣೆ'ಎಂಬ ನಿಲುವಿನೊಂದಿಗೆ, ಅಂತಾರಾಷ್ಟ್ರೀಯ 'ಚಂದ್ರ ದಿನ'ವನ್ನು, ರಾಜ್ಯದ ವಿಜ್ಞಾನ ಕೇಂದ್ರಗಳು ಹಾಗೂ ತಾರಾಲಯಗಳಲ್ಲಿ ಆಚರಿಸಲಾಯಿತು. ಜನಸಾಮಾನ್ಯರಲ್ಲಿ, ವಿಶೇಷವಾಗಿ ಯುವಜನತೆಯಲ್ಲಿ, ಚಂದ್ರನ ಕುರಿತ ವೈಜ್ಞಾನಿಕ, ತಾಂತ್ರಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಕುರಿತು, ಅರಿವು ಮೂಡಿಸುವ ದಿನವಾಗಿ, ಚಂದ್ರ ದಿನವನ್ನು, ವಿಶ್ವ ಮಟ್ಟದಲ್ಲಿ ಆಚರಿಸಲಾಗುತ್ತದೆ.**

<><><>

**ಕಲಬುರ್ಗಿ ಜಿಲ್ಲಾ ವಿಜ್ಞಾನ ಕೇಂದ್ರ ಸೇರಿದಂತೆ,ಪ್ರೌಢ ಶಾಲೆ ವಿದ್ಯಾರ್ಥಿಗಳಿಗಾಗಿ 'ಭವಿಷ್ಯದ ಚಂದ್ರನ ಮಾಡ್ಯೂಲ್' ಕುರಿತಾದ, 'ಕ್ಲೇ ಮಾಡೆಲ್ಲಿಂಗ್' ಸ್ಪರ್ಧೆ, ಹಲವೆಡೆ, ಆಯೋಜಿತವಾಗಿತ್ತು.**

<><><>

**'ಮೈ ಲೈಫ್ ಆನ್ ಮೂನ್ ಇನ್ 20'50", ಕಥಾ ಬರವಣಿಗೆ ಸ್ಪರ್ಧೆ, ಇಂದು ಕಲಬುರಗಿ ವಿಜ್ಞಾನ ಕೇಂದ್ರದಲ್ಲಿ ಜರುಗಲಿದೆ. ನಾಳೆ 'ಒನ್ ಮೂನ್, ಒನ್ ಮಿ 'ನ್, ಒನ್ ಫ್ಯೂಚರ್' ವಿ 'ಯ ಕುರಿತು, ಇಸ್ರೋದ ನಿವೃತ್ತ ವಿಜ್ಞಾನಿ ನಾರಾಯಣ ಇನಾಮದಾರ, ಉಪನ್ಯಾಸ ನೀಡಲಿದ್ದಾರೆ ಎಂದು, ಕಲಬುರಗಿ ಜಿಲ್ಲಾ ವಿಜ್ಞಾನ ಕೇಂದ್ರದ ಮುಖ್ಯಸ್ಥ ಕೆ.ಎಂ.ಸುನೀಲ ತಿಳಿಸಿದ್ದಾರೆ.**

<><><>

**ನೀಲ್ ಆರ್ಮ್‌ಸ್ಟ್ರಾಂಗ್ ಧ್ವನಿ 12 ಸೆಕೆಂದುಗಳು**

<><><>

**ಇದು, ನೀಲ್ ಆರ್ಮ್‌ಸ್ಟ್ರಾಂಗ್, ಚಂದ್ರ ಗೃಹದ ಮೇಲೆ ಕಾಲಿಟ್ಟ ಕ್ಷಣ, ಭೂಮಿಗೆ ಕಳುಹಿಸಿದ, ಪ್ರಥಮ ಸಂದೇಶ. 'ಮಾನವನಿಗೆ ಇದೊಂದು ಹೆಜ್ಜೆ; ಮನುಕುಲಕ್ಕೆ ದೈತ್ಯ ಜಿಗಿತ' ಎಂದು, ನೀಲ್ ಉದ್ಘರಿಸಿದ, ಅವಿಸ್ಮರಣೀಯ, ಐತಿಹಾಸಿಕ ಕ್ಷಣವನ್ನು, ನಿನ್ನೆ ರಾಜ್ಯ ಹಲವೆಡೆ ಅರ್ಥಪೂರ್ಣವಾಗಿ, ಆಚರಿಸಿ ಸಂಭ್ರಮಿಸಲಾಯಿತು.**

**ಈ ಕುರಿತು, ಒಂದು ವರದಿ..**

***ನೀಲ್ ಆರ್ಮ್‌ಸ್ಟ್ರಾಂಗ್, ಮತ್ತು ಬಜ್ ಆಲ್ಡ್ರೀನ್ 1969ರ ಜುಲೈ 21 ರಂದು, ಅಂದರೆ, ಈ ದಿನ, ಭಾರತೀಯ ಕಾಲಮಾನದ ಪ್ರಕಾರ, ಬೆಳಗ್ಗೆ, 8 ಗಂಟೆ 26 ನಿಮಿಷಕ್ಕೆ ಹಾಗೂ ಅಮೆರಿಕದ ಕಾಲಮಾನ, ಜುಲೈ 20, ನಿನ್ನೆ ರಾತ್ರಿ 10 ಗಂಟೆ 56 ನಿಮಿಷಕ್ಕೆ, ಚಂದ್ರನ ಮೇಲೆ ಮೊದಲ ಹೆಜ್ಜೆ ಇರಿಸಿದ, ಮಾನವ ಅಭ್ಯುದಯದ ಚಾರಿತ್ರಿಕ ಘಟನೆಯನ್ನು, 'ಚಂದ್ರ ದಿನಾಚರಣೆ' ಸ್ಮರಿಸಿತು.***

***ಚಂದ್ರನ ನೆಲದ ಮೇಲೆ ಇಳಿದಾಕ್ಷಣ, ನೀಲ್ ನೌಕೆಯಿಂದ ಹೊರಬರಲಿಲ್ಲ. ಲೂನಾರ್ ಮಾಡ್ಯೂಲ್ ನೌಕೆ ಚಂದ್ರನ ಮೇಲಿಳಿದ ಸುಮಾರು 6 ಗಂಟೆ, 38 ನಿಮಿಷಗಳ ಬಳಿಕ, ಸ್ಯಾಟರ್ನ್ ಫೈವ್ ರಾಕೆಟ್‌ನ ನೌಕೆಯಿಂದ, ಏಣಿ ಮೂಲಕ ಚಂದ್ರನ ಮೇಲೆ ಹೆಜ್ಜೆ ಇರಿಸಿದರು. 19 ನಿಮಿಷಗಳ ಬಳಿಕ ಬಜ್ ಆಲ್ಡ್ರಿನ್ ಚಂದ್ರನ ಮೇಲೆ ಪಾದಾರ್ಪಣೆ ಮಾಡಿದರು. ಮೈಕೆಲ್ ಕಾಲಿನ್ಸ್ ನೌಕೆಯಲ್ಲೇ ಉಳಿದರು.***

***ಚಂದ್ರನ ಮೇಲೆ ಒಟ್ಟು 21 ಗಂಟೆ, 36 ನಿಮಿಷಗಳ ಕಾಲ ಕಳೆದ ಮೂವರು ಗಗನಯಾತ್ರಿಗಳ ಪೈಕಿ, ನೀಲ್ ಮತ್ತು ಬಜ್ ಎರಡೂವರೆ ತಾಸು ಚಂದ್ರನ ಮೇಲೆ ಓಡಾಡಿ, ಕಲ್ಲು, ಮಣ್ಣು ಸಂಗ್ರಹಿಸಿ, ಲೂನಾರ್ ಮಾಡ್ಯೂಲ್ ಮೂಲಕ, ಮೈಕೆಲ್ ನಡೆಸುತ್ತಿದ್ದ ಕೋಲಂಬಿಯಾ ಕಮಾಂಡ್ ಮಾಡ್ಯೂಲ್‌ಗೆ ಬಂದು ತಲುಪಿದರು.***

***ಅಲ್ಲಿಂದ ಎರಡು ದಿನ, 19 ಗಂಟೆ ಪ್ರಯಾಣಿಸಿ, 1969ರ ಜುಲೈ 24 ರಂದು, ಸಂಜೆ 4.50 ಕ್ಕೆ, ಭೂಮಿಗೆ ತಲುಪಿದರು. ಚಂದ್ರನ ಮೇಲೆ ಪಾದಾರ್ಪಣೆ ಮಾಡಿ, ಇಂದಿಗೆ 56 ವರ್ಷಗಳು ಪೂರ್ಣಗೊಂಡವು.***

<><><>

**ವಿವೇಕ ಧ್ವನಿ 118 ಸೆಕೆಂದುಗಳು**

<><><>

**ರಾಜ್ಯದಲ್ಲಿ ಇತ್ತೀಚೆಗೆ, ಡಿಜಿಟಲ್ ಯು.ಪಿ.ಐ. ಮೂಲಕ ಪಾವತಿ ಬಗ್ಗೆ, ವರ್ತಕರಲ್ಲಿ ಅತೃಪ್ತಿ ವ್ಯಕ್ತವಾಗಿರುವ ಹಿನ್ನೆಲೆ, ಕೇಂದ್ರ ಸರ್ಕಾರದೊಂದಿಗೆ ಚರ್ಚಿಸುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಷ್ಟ ಪಡಿಸಿದ್ದಾರೆ. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲೂಕು, ಬೀಚನಹಳ್ಳಿಯ ಕಬಿನಿ ಜಲಾಶಯಕ್ಕೆ, ಉಪ ಮುಖ್ಯಮಂತ್ರಿ ಅವರೊಂದಿಗೆ, ಬಾಗಿನ ಅರ್ಪಿಸಿ, ಮಾತನಾಡಿದರು.**

<><><>

ಜಲ ಸಂಪನ್ಮೂಲ ಖಾತೆ ಸಚಿವ, ಡಿ.ಕೆ. ಶಿವಕುಮಾರ, ಮಾತನಾಡಿ, ರಾಜ್ಯದ ಅಣೆಕಟ್ಟುಗಳ ಸುರಕ್ಷತೆ ಖಾತ್ರಿ ಪಡಿಸಲು, ಸರ್ಕಾರ ತಾಂತ್ರಿಕ ಸಮಿತಿ ರಚಿಸಿದೆ; ವರದಿ ಆಧರಿಸಿ, ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು. ತುಂಗಭದ್ರಾ ಅಣೆಕಟ್ಟೆ ಕ್ರಸ್ಟ್ ಗೇಟ್ ದುರಸ್ತಿಯಾದ ಬಳಿಕ, ರಾಜ್ಯದ ಎಲ್ಲ ಅಣೆಕಟ್ಟುಗಳ ಸುರಕ್ಷತೆ ಪರಿಶೀಲಿಸಲಾಗುತ್ತಿದೆ ಎಂದರು. ಕಬಿನಿ ವ್ಯಾಪ್ತಿಯಲ್ಲಿ, 88 ಕೋಟಿ ಮೊತ್ತದ, ಹನಿ ನೀರಾವರಿ ಯೋಜನೆಗೆ, ಡಿ.ಪಿ.ಆರ್. ಸಿದ್ಧಗೊಳಿಸಿ ಪ್ರಸ್ತಾವ ಸಲ್ಲಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಹೇಳಿದರು.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕು, ಮರಳಿ ಗ್ರಾಮದಲ್ಲಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸರ್ಕಾರದ, 11 ವರ್ಷಗಳ ಸಾಧನೆಯ, ಅವಲೋಕನ ಸಭೆಯನ್ನು ಉದ್ಘಾಟಿಸಿದರು. ಬಳ್ಳಾರಿ ವಿಭಾಗದ ಬಿಜೆಪಿ ಪ್ರಮುಖರು ಈ ಸಭೆಯಲ್ಲಿ, ಪಾಲ್ಗೊಂಡಿದ್ದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(1 ನಿ. 4 ಸೆ.)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಬೆಂಗಳೂರಿನ, ವೈಜ್ಞಾನಿಕ ಮತ್ತು ಕೈಗಾರಿಕಾಸಂಶೋಧನಾ ಮಂಡಳಿಯ, ಅತ್ಯಾಧುನಿಕ ಪ್ಯಾರಾಡೈಮ್ -4 ವೈಜ್ಞಾನಿಕ ಪ್ರಯೋಗಾಲಯದಲ್ಲಿ, ಇಂದಿನಿಂದ 5 ದಿನಗಳ ಕಾಲ, 'ಜಿಜ್ಞಾಸಾ' ಚಿಂತನ-ಮಂಥನ ಕಾರ್ಯಾಗಾರ, ಆಯೋಜಿತವಾಗಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನ್ ಕಿ ಬಾತ್‌ನ, 119ನೇ ಆವೃತ್ತಿಯಲ್ಲಿ, 'ಯುವಜನತೆ ವೈಜ್ಞಾನಿಕ ಸಂಶೋಧನಾ ಪ್ರಯೋಗಾಲಯಗಳಲ್ಲಿ, ಒಂದು ದಿನ ಕಳೆಯುವ ಮತ್ತು ವಿಜ್ಞಾನದೊಂದಿಗೆ ತಮ್ಮ ಆಸಕ್ತಿಯನ್ನು ಗಾಢವಾಗಿಸಲು, ವಿಜ್ಞಾನಿಯಾಗಿ ಒಂದು ದಿನ, ಅನುಭವ ಗಳಿಸುವಂತೆ' ಕರೆ ನೀಡಿದ್ದರು.

<><><>

8 ರಿಂದ 10ನೇ ತರಗತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು, ಜಿಜ್ಞಾಸಾ ಕಾರ್ಯಾಗಾರಕ್ಕೆ ಆಯ್ಕೆ ಮಾಡಲಾಗಿದೆ.

<><><>

ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು ಮಹಾಲಿಂಗಪುರದ, ಕೆ.ಎಲ್.ಇ. ಶಿಕ್ಷಣ ಸಂಸ್ಥೆಯ, ಎಸ್.ಇ.ಪಿ. ಪ್ರೌಢ ಶಾಲೆಯ, ವಿಜ್ಞಾನ ಸುಗಮಗಾರ್ತಿ, ಸಪ್ನಾ ಶ್ರೀಶೈಲ ಅನಿಗೋಳ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಸಪ್ನಾ ಶ್ರೀಶೈಲ ಅನಿಗೋಳ ಧ್ವನಿ 50 ಸೆಕೆಂದುಗಳು

<><><>

ಧಾರವಾಡ ಜಿಲ್ಲೆಯ ನವಲಗುಂದ ಹಾಗೂ ಗದಗ ಜಿಲ್ಲೆ ನರಗುಂದದಲ್ಲಿ, 1980, ಜುಲೈ 21 ರಂದು ನಡೆದ ರೈತ ಬಂಡಾಯದ ಸ್ಮರಣೆಗಾಗಿ, ಇಂದು 45ನೇ ರೈತ ಹುತಾತ್ಮ ದಿನಾಚರಣೆ. ಬೆಳೆಗಾರರ ಹಿತಾಸಕ್ತಿ ಕಾಪಾಡಲು, ಮಲಪ್ರಭಾ ನೀರಾವರಿ ಯೋಜನೆಯಿಂದ ರೈತರಿಗೆ ಉಂಟಾದ ತೊಂದರೆ ಮತ್ತು ಬೆಳೆಗೆ ಯೋಗ್ಯ ಬೆಲೆ ನೀಡುವಂತೆ ಆಗ್ರಹಿಸಿ, ರೈತರು ನಡೆಸಿದ, ನ್ಯಾಯಯುತ ಹೋರಾಟದಲ್ಲಿ, ಪೊಲೀಸರ ಗೋಲಿಬಾರ್‌ನಲ್ಲಿ, ಇಬ್ಬರು ರೈತರ ಬಲಿದಾನವಾಯಿತು. ನರಗುಂದ ಬಂಡಾಯ, ರೈತ ಚಳವಳಿ ಮತ್ತು ರೈತ ಸಂಘಟನೆಗಳ ಉಗಮಕ್ಕೆ ಕಾರಣವಾಯಿತು.

<><><>

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಸ್ವರ ಸಾಮ್ರಾಟ್, ಪದ್ಮಭೂ ’ಣ, ಪಂಡಿತ ಬಸವರಾಜ ರಾಜಗುರು ಅವರ, 34ನೇ ಪುಣ್ಯಸ್ಮರಣೆ ಇಂದು; ತನ್ನಿಮಿತ್ತ, ಬೆಳಗ್ಗೆ 9:30ಕ್ಕೆ, ಧಾರವಾಡದ ಹೊಸಯಲ್ಲಾಪುರದಲ್ಲಿರುವ, ರಾಜಗುರು ಅವರ ಸಮಾಧಿ ಸ್ಮಾರಕ ಸ್ಥಳದಲ್ಲಿ, ಶ್ರದ್ಧಾಂಜಲಿ ಹಾಗೂ ಸಂಗೀತ ನಮನ ಜರುಗಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ, ಕೆ.ಎಚ್.ಚನ್ನೂರ, ಟ್ರಸ್ಟ್ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಹಾಗೂ ಟ್ರಸ್ಟ್ ಸದಸ್ಯೆ ಭಾರತಿದೇವಿ ರಾಜಗುರು ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಗದಗ ನಾಗಾವಿಯ, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, 'ಕವಲು ದಾರಿಯಲ್ಲಿ ಮಾನವ ಹಕ್ಕುಗಳು; ಭಾರತ ಮತ್ತು ಪಶ್ಚಿಮ' ವಿಷಯದ ವಿಚಾರ ಸಂಕಿರಣ ಆಯೋಜಿತವಾಗಿದೆ. ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದು, ಅಥಿತಿಯಾಗಿ, ಕಾನೂನು ಆಯೋಗದ ಅಧ್ಯಕ್ಷ, ನ್ಯಾಯಮೂರ್ತಿ ಅಶೋಕ ಹಿಂಚಿಗೇರಿ ಪಾಲ್ಗೊಳ್ಳಲಿದ್ದಾರೆ.

<><><>

'ಪ್ರತಿ ನಡೆಯೂ ಪ್ರಮುಖ', ಎಂಬ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಚದುರಂಗ ದಿನ ಆಚರಿಸಲಾಯಿತು. 1924ರಲ್ಲಿ ಅಂತಾರಾಷ್ಟ್ರೀಯ ಚೆಸ್ ಒಕ್ಕೂಟ – ಫಿಡೆ ಸ್ಥಾಪನೆಯ ಸ್ಮರಣಾರ್ಥ, ವಿಶ್ವಾದ್ಯಂತ ಚೆಸ್ ಸಮುದಾಯ, ಪ್ರತಿ ವ ’ೕ ಜುಲೈ 20 ರಂದು, ಚದುರಂಗ ದಿನ ಆಚರಿಸುತ್ತದೆ. ಪ್ರಸಕ್ತ ವರ್ಷ, 'ಸಾಮಾಜಿಕ ಚದುರಂಗ ವ ’ೕ' ಎಂಬ ಉಪಕ್ರಮ ಆರಂಭಿಸಿದ್ದು, ಚೆಸ್ ಕ್ರೀಡೆ, ಶಿಕ್ಷಣ, ಸಬಲೀಕರಣ, ಸುದೃಢ ಮಾನಸಿಕತೆ ಸಾಧಿಸಲು, ಬಳಸುವ ಸಾಧನ ಎಂದು, ಅರಿವು ಮೂಡಿಸಲಾಗುತ್ತಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಚಂದ್ರನ ಸುಸ್ಥಿರ ಅನ್ವೇಷಣೆಯ, ಮಹತ್ವ ತಿಳಿಸಲು, ಅಂತಾರಾಷ್ಟ್ರೀಯ ಚಂದ್ರ ದಿನಾಚರಣೆ.
- ಬೆಂಗಳೂರಿನ, ಸಿ.ಎಸ್.ಐ.ಆರ್. ಪ್ರಯೋಗಾಲಯದಲ್ಲಿ, ಇಂದಿನಿಂದ ಐದು ದಿನ, 'ಜಿಜ್ಞಾಸಾ' ಕಾರ್ಯಾಗಾರ.
- ಡಿಜಿಟಲ್ ಪಾವತಿ ಬಗ್ಗೆ, ವರ್ತಕರಲ್ಲಿ ಅತೃಪ್ತಿ; ಕೇಂದ್ರದೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶೀಘ್ರ ಸಮಾಲೋಚನೆ.
- ನರಗುಂದ ರೈತ ಬಂಡಾಯಕ್ಕೆ 45 ವರ್ಷ; ಇಂದು ರೈತ ಹುತಾತ್ಮ ದಿನದ, ಸ್ಮರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>